ಶ್ರೀ ಎಂ. ವೀರಪ್ಪ ಮೊಯ್ಲಿ (ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಸಚಿವರ ಪರವಾಗಿ).—

ಅ)	ಖಾನಾಪುರ	...	೧೫ ಬಾವಿಗಳು
	ಬೆಳಗಾಂ (ತಾ)	...	೩ ಬಾವಿಗಳು
	ಬಾಗೆವಾಡಿ, ಉಚ್ಚಗಾವ್	...	ಬಾವಿ ಕೊರೆದಿರುವುದಿಲ್ಲ
ಆ)	ಕಾರ್ಯನಿರ್ವಹಿಸುತ್ತಿರುವ ಬಾವಿಗಳು	...	೧೧
	ಕಾರ್ಯನಿರ್ವಹಿಸುತ್ತಿಲ್ಲದ ಬಾವಿಗಳು	...	೧
	ವಿದ್ಯುದೀಕರಣ ಆಗಬೇಕಾಗಿರುವ ಬಾವಿಗಳು	...	೬
ಇ)	೧. ಕೃಷಿ ಕೈಗಾರಿಕಾ ನಿಗಮ	...	೮
	೨. ಮಹಾಜನ ಬೋರ್‌ವೆಲ್ಸ್ ಕಂಪನಿ	...	೩
	೩. ರಿಗ್‌ವೆಲ್ ಇಂಜಿನೀಯರ್ಸ್	...	೨
	೪. ಜೇರನ್ ಬೋರ್‌ವೆಲ್ಸ್	...	೫
			೧೮

ಈ) ಈ ನಿರುಪಯುಕ್ತ ಕೊಳವೆ ಬಾವಿ ಬಾಬ್ತು ಯಾವುದೇ ಬ್ಯಾಂಕ್ ಸಾಲ ಮಂಜೂರಾಗಿರುವುದಿಲ್ಲ. ಈ ಕೊಳವೆ ಬಾವಿಯನ್ನು ವಿಫಲ ಎಂದು ಪರಿಗಣಿಸಲಾಗಿದೆ. ಇದರ ಯಾವುದೇ ವೆಚ್ಚ ಫಲಾನುಭವಿಯ ಮೇಲೆ ಹೊರಿಸಿರುವುದಿಲ್ಲ.

ಅಧ್ಯಕ್ಷರು.—ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ವಿರೇಂದ್ರಪಾಟೀಲ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೯೦ನೇ ಇಸವಿಯ ಕರ್ನಾಟಕ ರಾಜ್ಯದ ನಾಗರೀಕ ಸೇವೆಗಳ (ತಿದ್ದುಪಡಿ) ಅಧ್ಯಾದೇಶ (೧೯೯೦ನೇ ಇಸವಿಯ ೩ನೇ ಸಂಖ್ಯೆಯ ಅಧ್ಯಾದೇಶ)ವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ವರದಿಯನ್ನೊಪ್ಪಿಸುವುದು

ಶ್ರೀಮತಿ ನಾಗಮ್ಮ ಕೇಶವ ಮೂರ್ತಿ (ಉಪಾಧ್ಯಕ್ಷರು).—ಮಾನ್ಯ ಅಧ್ಯಕ್ಷರೇ, ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎರಡನೆಯ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸದನದ ಮುಂದೆ ಮಂಡಿಸಲಾಯಿತು.

ಶ್ರೀ ಬಾಬಾ ಗೌಡ ರುದ್ರಗೌಡ ಪಾಟೀಲ್.—ಮೇಲಿನ ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎರಡನೆಯ ವರದಿಯನ್ನು ಸಭೆಯು ಒಪ್ಪಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.—ಮೇಲಿನ ನಿರ್ಣಯವನ್ನು ಸಭೆಯ ಒಪ್ಪಿಗೆಗಾಗಿ ಮಂಡಿಸಲಾಯಿತು.

ಕೊಂಕಣ ರೈಲ್ವೆ ಪ್ರಾಯೋಜಕತ್ವ ಮತ್ತು ರೈತರ ಸಾಲ ಮನ್ನಾ ಬಗ್ಗೆ

†ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೆ, ನಾನೂ, ಮಾನ್ಯ ಏಕಾಂತಯ್ಯನವರು ಹಾಗೂ ಮಾನ್ಯ ವಾಟಾಳ್ ನಾಗರಾಜ್‌ರವರು ಈಗಾಗಲೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಈ ಸಂದರ್ಭದಲ್ಲಿ ಸಭಾನಾಯಕರಾದ ಮುಖ್ಯ ಮಂತ್ರಿಗಳೂ ಸದನದಲ್ಲಿ ಇರುವುದರಿಂದ ಇದನ್ನು ಚರ್ಚೆ ಮಾಡುವುದು ಒಳ್ಳೆಯದು. ಇದರ ಬಗ್ಗೆ ರಾಜ್ಯದ ಜನತೆಯೂ ಸಹಾ ಬಹಳ

ಕಾರರರಾಗಿದ್ದಾರೆ. ಪತ್ರಿಕೆಗಳಲ್ಲೂ ವರದಿಯಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಗೆ ಹೋಗಿದ್ದ ಸಂದರ್ಭದಲ್ಲಿ, ೪ ದಿನ ದೆಹಲಿಯಲ್ಲೇ ವಾಸ್ತವ್ಯ ಹೂಡಿದ್ದ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಜೊತೆ ಮಾತುಕತೆ ಮಾಡಿ ಕೊಂಕಣ ರೈಲ್ವೆ ಬಗ್ಗೆ ಕರ್ನಾಟಕ ರಾಜ್ಯ ಸರ್ಕಾರ ಯಾವ ರೀತಿ ಭಾಗವಹಿಸುತ್ತದೆ? ಆದರಲ್ಲಿ ರಾಜ್ಯಪಾಲರ ಎಷ್ಟು ಹಣವನ್ನು ಹೂಡುತ್ತದೆ ಎಂಬ ಬಗ್ಗೆ, ಒಪ್ಪಂದವಾಗಿದೆ ಎನ್ನುವ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಸದನ ನಡೆಯುತ್ತಿರುವ ಸಂದರ್ಭದಲ್ಲಿ ಈ ವಿಚಾರವಾಗಿ ಸದನಕ್ಕೆ ಮತ್ತು ಜನತೆಗೂ ಕೂಡ ವಿವರಗಳು ಗೊತ್ತಾಗಬೇಕಾಗುತ್ತದೆ. ಆದುದರಿಂದ ಕೊಂಕಣ ರೈಲ್ವೆ ವಿಚಾರವಾಗಿ ಮಾನ್ಯ ಮುಖ್ಯ ಮಂತ್ರಿಗಳು ವಿವರಗಳನ್ನು ಸದನಕ್ಕೆ ತಿಳಿಸಿದರೆ ಅನುಕೂಲವಾಗುತ್ತದೆ ಎಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿಜ್ಞಾಪಿಸಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೆ, ತಾವು ಅನುಮತಿ ಕೊಟ್ಟರೆ ಈ ವಿಚಾರದ ಬಗ್ಗೆ ಸ್ಟೇಟ್‌ಮೆಂಟ್‌ನ್ನು ಸೋಮವಾರ ದಿನದಂದು ಕೊಡಲು ಬಯಸುತ್ತೇನೆ.

ಅಧ್ಯಕ್ಷರು.—ಆಯಿತು.

ಶ್ರೀ ವಾಟಾಳ್ ನಾಗರಾಜ್. - ಮಾನ್ಯ ಅಧ್ಯಕ್ಷರೆ, ಕೊಂಕಣ ರೈಲ್ವೆ ವಿಚಾರದಲ್ಲಿ ಮತ್ತು ಸಾಲ ಮನ್ನಾ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಕೇಂದ್ರ ಸರ್ಕಾರದ ಜೊತೆಯಲ್ಲಿ ಏನು ಮಾತನಾಡಿದ್ದಾರೆ, ಯಾವ ನಿಲುವಿಗೆ ಬಂದಿದ್ದಾರೆ ಎಂದು ದಯಮಾಡಿ ತಿಳಿಸಬೇಕು. ಆ ಕುರಿತು ಕೇಂದ್ರ ಸರಕಾರದವರು ಮಾಡಿದ ವಾಗ್ದಾನ ಏನು ಮತ್ತು ಆ ದಿಶೆಯಲ್ಲಿ ಕರ್ನಾಟಕ ಸರಕಾರದವರು ತಳೆದ ನಿಲುವು ಏನು ಎಂಬುದನ್ನು ದಯವಿಟ್ಟು ತಿಳಿಸಬೇಕು. ಏಕೆಂದರೆ, ಕೊಂಕಣ ರೈಲ್ವೆ ವಿಚಾರ ದಷ್ಟೇ ಮಹತ್ವ ರೈತರ ಸಾಲ ಮನ್ನಾ ಕುರಿತು ಕೂಡ ಇದ್ದೇ ಇದೆ. ಸಾಲ ಮನ್ನಾ ವಿಚಾರದಲ್ಲಿ ಕೇಂದ್ರ ಸರಕಾರದವರೊಂದಿಗೆ ಯಾವ ರೀತಿಯ ಮಾತು ಮತ್ತು ಹೊಂದಾಣಿಕೆ ಮಾಡಿಕೊಂಡು ಬಂದಿದ್ದಾರೆ ಎಂದು ತಿಳಿಸಬೇಕು. ಈ ಬಗ್ಗೆ ಸರಕಾರದ ನೀತಿಯನ್ನು ಪ್ರಕಟಿಸಬೇಕು ಈ ಕುರಿತು ತಮ್ಮ ಪಕ್ಷದ ನಿಲುವು ಏನೆಂಬುದನ್ನು ಹೇಳಬೇಕು. ತಮ್ಮ ಪಕ್ಷದ ಅಧ್ಯಕ್ಷರು ಕೂಡ ಈ ವಿಚಾರದಲ್ಲಿ ತಮ್ಮ ಅಭಿಪ್ರಾಯಗಳನ್ನು ಕೇಳಿದ್ದು ಅದು ಪತ್ರಿಕೆಗಳಲ್ಲಿ ಬಂದಿದೆ. ಆದುದರಿಂದ ಈ ಬಗ್ಗೆ ಸ್ಪಷ್ಟವಾಗಿ ರಾಜ್ಯ ಸರಕಾರದವರು ಮತ್ತು ಕೇಂದ್ರ ಸರ್ಕಾರದವರು ತಳೆದ ನಿಲುವನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ರೈತರುಗಳಿಗೆ ಸಹಕಾರ ಸಂಘದಿಂದ ಗೊಬ್ಬರದ ಸರಬರಾಜು ಆಗುತ್ತಿಲ್ಲ ಎನ್ನುತಕ್ಕಂಥಾದ್ದನ್ನು ಕೇಳುವ ಸಲುವಾಗಿ ಗಮನ ಸೆಳೆಯುವ ಸೂಚನೆಯನ್ನು ಎರಡು ದಿವಸಗಳ ಹಿಂದೆಯೇ ಕಳುಹಿಸಿದ್ದೇನೆ, ಅದು ಇನ್ನೂ ಬಂದಿಲ್ಲ. ದಯಮಾಡಿ ಅದಕ್ಕೆ ಅವಕಾಶ ಮಾಡಿಕೊಡಿ.....

ಅಧ್ಯಕ್ಷರು.—ಈಗ ಮಾನ್ಯ ಲೋಕೋಪಯೋಗಿ ಸಚಿವರು ಗುಲ್ಬರ್ಗಕ್ಕೆ ಹೋಗಿ ಅಧಿಕ ಮಳೆಯಿಂದ ಗುಲ್ಬರ್ಗ, ಬೀದರ್ ಜಿಲ್ಲೆಗಳಲ್ಲಿ ಆದ ಹಾನಿಯ ಅಂದಾಜು ಕುರಿತು ತಮ್ಮ ಹೇಳಿಕೆಯನ್ನು ನೀಡಲಿದ್ದಾರೆ.

ಅತಿವೃಷ್ಟಿಯಿಂದ ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ ಆದ ಹಾನಿಯ ಬಗ್ಗೆ ಮಂತ್ರಿಗಳ ಹೇಳಿಕೆ.

† ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು).—ಸನ್ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು ನಾನು ಈ ಹೇಳಿಕೆಯನ್ನು ಕೊಡುತ್ತೇನೆ.

ಮಾನ್ಯ ಮುಖ್ಯಮಂತ್ರಿಗಳವರ ಆದೇಶದ ಮೇರೆಗೆ ನಾನು ದಿನಾಂಕ ೧೬-೬-೯೦ ರಂದು ಗುಲ್ಬರ್ಗ ಜಿಲ್ಲೆಯಲ್ಲಿ ಮತ್ತು ದಿನಾಂಕ ೧೭-೬-೯೦ ರಂದು ಬೀದರ್ ಜಿಲ್ಲೆಯಲ್ಲಿ ಅಧಿಕ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಲ್ಲಿ ಪ್ರವಾಸ ಮಾಡಿರುತ್ತೇನೆ. ಪ್ರವಾಸ ಸಮಯದಲ್ಲಿ ಲೋಕಸಭಾ ಸದಸ್ಯರುಗಳಾದ ಶ್ರೀ ಬಿ.ಜಿ. ಜವಳಿ, ಶ್ರೀ ನರಸಿಂಗಸೂರ್ಯವಂಶಿ ಮತ್ತು ಶಾಸಕ ಮಿತ್ರರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ, ಶ್ರೀ ಧರ್ಮಸಿಂಗ್, ಶ್ರೀ ಬಾಬುರಾವ್ ಚಿಂಚನಸೂರು, ಶ್ರೀ ಬಸವರಾಜ್ ಪಾಟೀಲ್ ಮತ್ತು ಡಾ. ಮಲಕಾರೆಡ್ಡಿ ಇವರುಗಳು ಹಾಜರಿದ್ದರು.

ದಿ : ೩-೫-೯೦ ರಂದು ಆಂಧ್ರ ಕರಾವಳಿ ಚಂಡಮಾರುತದ ಹಿನ್ನೆಲೆಯಲ್ಲಿ ಗುಲ್ಬರ್ಗ ಜಿಲ್ಲೆಯಲ್ಲಿ ದಿ : ೭-೫-೯೦ ರಿಂದ ಪ್ರಾರಂಭವಾದ ಅಧಿಕ ಮಳೆಯಿಂದ ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳು

† ಈ ಚಿಪ್ಪೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ